**OS No. 1141/2015**
**PW-1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ 11.12.2019

ಪಾಟೀ ಸವಾಲುಃ ಶ್ರೀ. ಎಸ್.ಸಿ.ಜೆ. 8 ರಿಂದ 11, 13 ರಿಂದ 15, 17, 18, 22 ನೇ ಪ್ರತಿವಾದಿ ಪರ ವಕೀಲರಿಂದ.

1. ಈ ದಾವೆಯನ್ನು ಯಾರ ವಿರುದ್ಧ ದಾಖಲಿಸಿದ್ದೇನೆ ಎಂದು ನನಗೆ ಮಾಹಿತಿ ಇಲ್ಲಾ. ದಾವಾ ಆಸ್ತಿ ನನ್ನ ಜಾಗೆ ಎಂದು ಹೇಳಿ ಈ ದಾವೆಯನ್ನು ಹಾಕಿದ್ದೇನೆ. ದಾವಾ ಆಸ್ತಿಯನ್ನು ನಮ್ಮವರು ಯಾರು ಖರೀದಿಸಿಲ್ಲಾ. ದಾವಾ ಆಸ್ತಿಯನ್ನು ದತ್ತು ಮಾರುತಿ ಪಾಟೀಲ ಎನ್ನುವವರು ಮಾರಾಟ ಮಾಡಿದ್ದರು. ದತ್ತು ತೀರಿಕೊಂಡಿದ್ದಾರೆ ಆದರೆ ಮಾರುತಿ ಜೀವಂತ ಇದ್ದಾರೆ. ದತ್ತು ಯಾವಾಗ ತೀರಿಕೊಂಡರು ಎಂದು ನನಗೆ ಮಾಹಿತಿ ಇಲ್ಲಾ. ದತ್ತು ತೀರಿಕೊಂಡು ಈಗ 25 ವರ್ಷ ಆಗಿರಬಹುದು. ದತ್ತು ಇವರಿಗೆ ಇಬ್ಬರು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಶಾಬಕ್ಕಾ, ರಂಜನಾ, ಮಾರುತಿ ಮತ್ತು ಪರಶರಾಮ ಇರುತ್ತಾರೆ, ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲಾ ಎಂದರೆ ಸರಿ. ಹೆಣ್ಣು ಮಕ್ಕಳಿಗೆ ಎಷ್ಟು ಆಸ್ತಿ ಬರುತ್ತದೆ ಎಂದು ನನಗೆಹೇಳಲು ಬರುವುದಿಲ್ಲ. ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇಲ್ಲಾ. 1 ನೇ ಪ್ರತಿವಾದಿ 19 ಗುಂಟೆ ಜಾಗವನ್ನು ಮಾರಾಟ ಮಾಡಿದ್ದಾರೆ. ಆ 19 ಗುಂಟೆ ಜಮೀನಿಗೆ 1 ನೇ ಪ್ರತಿವಾದಿಯ ಹೆಸರು ಹೇಗೆ ದಾಖಲಾಗಿತ್ತು ಎಂದು ನನಗೆ ಹೇಳಲು ಆಗವುದಿಲ್ಲ. ಅದೇ ರೀತಿ 2 ನೇ ಪ್ರತಿವಾದಿ ಆತನ ಹಿಸ್ಸೆಯ 4 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾನೆ. 1 ಮತ್ತು 2 ನೇ ಪ್ರತಿವಾದಿಯರು ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**OS No. 1141/2015**
**PW-1**

2. ದಾವಾ ಆಸ್ತಿಗಳಲ್ಲಿ ಈಗ ಪ್ಲಾಟಗಳು ಆಗಿದ್ದಾವೆ. 10-15 ವರ್ಷದಿಂದ ದಾವಾ ಆಸ್ತಿಗಳಲ್ಲಿ ಕೃಷಿ ಮಾಡುವುದು ನಿಲ್ಲಿಸಲಾಗಿದೆ. ದಾವಾ ಆಸ್ತಿಗಳಲ್ಲಿ ಈಗ ಮನೆಗಳು ಇವೆ. ದಾವಾ ಆಸ್ತಿಗಳಲ್ಲಿ ಸುಮಾರು 50 ಮನಗಳು ಇವೆ. 50 ಮನೆಯ ಮಾಲೀಕರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲಾ ಎಂದರೆ ಸರಿ. 50 ಮನೆಗಳನ್ನು ದಾವಾ ಆಸ್ತಿಯಲ್ಲಿ ಕಟ್ಟಿದೆ ಎಂದು ಬರೆದಿಲ್ಲಾ ಎಂದರೆ ಸರಿ. ಯಾರು ಯಾರು ಹಿಸ್ಸೆಯ ಎಷ್ಟು ಮನೆಗಳು ಎಂದು ಹೇಳಲು ಆಗುವುದಿಲ್ಲ. ನನ್ನ ಹಿಸ್ಸೆಯ 7 ಗುಂಟೆ ಜಮೀನನ್ನು ನಾನು ಮಾರಾಟ ಮಾಡಿದ್ದೇನೆ. ನಾನು ಮಾರಾಟ ಮಾರಿಡಿದ 7 ಗುಂಟೆ ಜಮೀನಿನಲ್ಲಿ 7 ಮನೆಗಳು ಕಟ್ಟಲಾಗಿದೆ, ಆ 7 ಜನರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲಾ ಎಂದರೆ ಸರಿ. 3 ನೇ ಪ್ರತಿವಾದಿಯ ಹಿಸ್ಸಗೆ 4 ಗುಂಟೆ ಬರುತ್ತದೆ ಆತ ಸಹ ಆ ಜಮೀನನ್ನು ಮಾರಾಟ ಮಾಡಿದ್ದಾನೆ. ಆತ ಯಾರಿಗೆ ಮಾರಾಟ ಮಾಡಿದ್ದಾನೆ ಮತ್ತು ಅಲ್ಲಿ ಎಷ್ಟು ಮನೆಗಳು ಕಟ್ಟಲಾಗಿದೆ ಎಂದರೆ ನನಗೆ ಗೊತ್ತಿಲ್ಲ. 4 ಮತ್ತು 5 ನೇ ಪ್ರತಿವಾದಿಯರ ತಂದೆ ನನಗೆ ಸಹೋದರನಾಗಬೇಕು. 4 ಮತ್ತು 5 ನೇ ಪ್ರತಿವಾದಿಯ ತಂದೆ 4 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ. ಆ ಜಾಗೆಯನ್ನು ಯಾರು ಖರೀದಿಸಿದ್ದಾರೆ ಮತ್ತು ಯಾರು ಮನೆ ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಜಾಗದಲ್ಲಿ ಎಷ್ಟು ಮನೆಗಳು ಕಟ್ಟಲಾಗಿದೆ ಎಂದು ಹೇಳಲು ಆಗುವುದಿಲ್ಲ. 6 ನೇ ವಾದಿ 1 ನೇ ಪ್ರತಿವಾದಿಗೆ ಚಿಕ್ಕಪ್ಪ ಆಗಬೇಕು. 6 ನೇ ಪ್ರತಿವಾದಿ 25 ವರ್ಷದ ಹಿಂದೆ ತೀರಿಕೊಂಡಿದ್ದಾರೆ. 6 ನೇ ಪ್ರತಿವಾದಿಗೆ 3 ಜನ ಹೆಣ್ಣು ಮಕ್ಕಳು ಇದ್ದಾರೆ. ನನ್ನ ಮನೆ ಮತ್ತು 6 ನೇ ಪ್ರತಿವಾದಿಯ ಮನ ಅಕ್ಕ ಪಕ್ಕದಲ್ಲಿ ಇದೆ. 6 ನೇ ಪ್ರತಿವಾದಿ ತೀರಿಕೊಂಡ ವಿಷಯವನ್ನು ನನ್ನ ವಕೀಲರಿಗೆ ತಿಳಿಸಿರಲಿಲ್ಲ. ಆತನ ಮೂರು ಜನ ಹೆಣ್ಣು ಮಕ್ಕಳು

ಅವರವರ ಗಂಡನ ಮನೆಯಲ್ಲಿ ವಾಸವಿದ್ದಾರೆ. 6 ನೇ ಪ್ರತಿವಾದಿಗೆ 6 ಗುಂಟೆ ಜಾಗ ಬರುತ್ತದೆ. 6 ನೇ ಪ್ರತಿವಾದಿಗೆ ಸಂಬಂಧಿಸಿದ ಹಿಸ್ಸೆ 1 ನೇ ಪ್ರತಿವಾದಿಯ ಬಳಿ ಇದೆ. ಅವರಗೆ ಸಂಬಂಧಿಸಿದ ಜಾಗದ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

3. ನನ್ನ ಅಜ್ಜನ ಹೆಸರು ಗಣಪತಿ. ನನ್ನ ಅಜ್ಜನಿಗೆ ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು. ಅವರ ಹೆಸರು ಗಾವಡು, ಅಪ್ಪಾಜಿ, ಬಾಹು ಮತ್ತು ಪುತಳಿಬಾಯಿ ಇರುತ್ತದೆ. ಅವರ ಮದ್ಯೆ ಪಾಲು ವಿಭಾಗ ಆಗಿರುವುದಿಲ್ಲ. ಪುತಿಳಿಬಾಯಿ ತೀರಿಕೊಂಡಿದ್ದಾಳೆ. ಆಕೆಗೆ ನಾಲ್ಕು ಜನ ಮಕ್ಕಳಿದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಮನೆತನದ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ ಗಾವಡು ಮತ್ತು ಅಪ್ಪಾಜಿ ಇವರು ಹೆಸರು ಇದೆ. ನನ್ನ ತಂದೆಯ ಹೆಸರು ಗಾವಡು ಇರುತದೆ. ನನ್ನ ತಂದೆಯ ಭಾಗಕ್ಕೆ ಮನೆತನದ ಆಸ್ತಿ ಎಂದು 4 ಗುಂಟೆ ಮತ್ತು ಸ್ವರ್ಯಾರ್ಜಿತವಾಗಿ ಗಳಿಸಿದ ಆಸ್ತಿ 24 ಗುಂಟೆ ಇರುತ್ತದೆ. ನನ್ನ ತಂದೆ 24 ಗುಂಟೆ ಜಮೀನನ್ನು ಖರೀದಿಸಿದ ಬಗ್ಗೆ ಖರೀದಿ ಪತ್ರ ಇರುತ್ತದೆ. ಆ ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನನ್ನ ತಮ್ಮ ರಮೇಶನ ಮಗಳು ವಿಜಯಮಾಲಾಳನ್ನು ಪಕ್ಷಗಾರರನ್ನಾಗಿ ತೋರಿಸಿಲ್ಲಾ ಎಂದರೆ ಸರಿ.

4. 1 ನೇ ಪ್ರತಿವಾದಿಯ ಅಜ್ಜ ನನಗೆ ಸಂಬಂಧಿಕನಲ್ಲ. ಅವರ ಮನೆತನವೇ ಬೇರೆ ಅವರಿಗೆ ಸಂಬಂಧಿಸಿದ ಹಿಸ್ಸೆ ಬೇರೆ ಇರುತ್ತದೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನೂ 15 ಗುಂಟೆ ಜಮೀನು ಬೇರೆ ಕಡೆ ಇದೆ. ಅದೇ ರೀತಿ 1 ರಿಂದ 6 ನೇ ಪ್ರತಿವಾದಿಯರಿಗೆ ಬೇರೆ ಆಸ್ತಿ ಸಹ ಇದೆ ಎಂದರೆ ಸರಿ. ನಮ್ಮ ಮನೆ ಮತ್ತು ಅವರ ಮನೆ ಬೇರೆ ಇದೆ ಎಂದರೆ ಸರಿ. ಮನಗಳ

ಉತಾರಗಳು ಪ್ರತ್ಯೇಕವಾಗಿ ಇವೆ ಎಂದರೆ ಸರಿ. ಯಾವಾಗಿನಿಂದ ಉತಾರಗಳು ಬೇರೆಯಾಗಿದ್ದಾವೆ ಎಂದು ನನಗೆ ಗೊತ್ತಿಲ್ಲ. ಅಂದಾಜು 100 ವರ್ಷದ ಹಿಂದೆ ಆಗಿದೆ ಎಂದರೆ ಇರಬಹುದು. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ಸಂಬಂಧಿಸಿದ 4-5 ಬೇರೆ ಜಮೀನುಗಳು ಇವೆ. 1 ರಿಂದ 6 ನೇ ಪ್ರತಿವಾದಿಯರಿಗೆ ಸಂಬಂಧಿಸಿದ 5-6 ಜಮೀನುಗಳು ಇದ್ದಾವೆ. 100 ವರ್ಷಗಳ ಹಿಂದಿನಿಂದ ಆ ಎಲ್ಲಾ ಜಮೀನುಗಳನ್ನು ನಾವು ಮತ್ತು ಪ್ರತಿವಾದಿಯರು ಬೇರೆಯಾಗಿ ಸಾಗುವಳಿ ಮಾಡುತ್ತಿದ್ದೇವೆ. ನಮಗೆ ಸಂಬಂಧಿಸಿದ ಉಳಿದ ಜಮೀನುಗಳನ್ನು ಮತ್ತು 1 ರಿಂದ 6 ನೇ ಪ್ರತಿವಾದಿಯರಿಗೆ ಸಂಬಂಧಿಸಿದ ಬೇರೆ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲಾ.

5. 7 ರಿಂದ 26 ಪ್ರತಿವಾದಿಯರು ಯಾರಿಗೆ ಸಂಬಂಧಿಸಿದ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿದ್ದಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಪ್ರತಿವಾದಿಯರ ಕಟ್ಟಿದ ಮನೆಗಳಿಗೆ ಉತಾರಗಳು ಇವೆ ಎಂದರೆ ಇರಬಹುದು. ಯಾರು ಯಾರು ಉತಾರಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಆ ಮನೆಗಳ ಮುಂದೆ ಕಂಕ್ರೆಟ ರಸ್ತೆ ಮತ್ತು ಗಟಾರ ಇದೆ. ಸದರಿ ಮನೆಗಳಿಗೆ ವಿದ್ಯುತ್ ಮತ್ತು ನೀರಿನ ಸಂಪರ್ಕ ಕೊಡಲಾಗಿದೆ. ಆ ಮನೆಗಳನ್ನು 10 ವರ್ಷದ ಹಿಂದೆ ಕಟ್ಟಲಾಗಿದೆ. ಈ ವಿಷಯಗಳನ್ನು ನಾನು ನಮ್ಮ ವಕೀಲರಿಗೆ ತಿಳಿಸಿಲ್ಲಾ. 7 ರಿಂದ 26 ಪ್ರತಿವಾದಿಯರನ್ನು ಹೊರತುಪಡಿಸಿ ಇನ್ನೂ ಹಲವರು ಮನೆ ಕಟ್ಟಿದ್ದಾರೆ ಹಾಗೆ ಎಷ್ಟು ಜನ ಮನೆಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲಾ. ದಾವಾ ಜಮೀನುಗಳಲ್ಲಿ ಸುಮಾರು 50 ಮನೆಗಳು ಆಗಿರಬಹುದು ಎಂದರೆ ಸರಿ. ಸದರಿಯವರು ಮನೆ ಕಟ್ಟುವಾಗ ಮನೆ ಕಟ್ಟಬೇಡಿ ಎಂದು ನಿರ್ಬಂಧಕಾಜ್ಞೆಯನ್ನು

**OS No. 1141/2015**
**PW-1**

ನ್ಯಾಯಾಲಯದಿಂದ ಪಡೆದಿಲ್ಲಾ. ಮನೆ ಕಟ್ಟಲು ನೀಡಿದ ಪರವಾನಗಿಯನ್ನು ಪ್ರಶ್ನಿಸಿರುವುದಿಲ್ಲಾ. ಅದೇ ರೀತಿ ಉತಾರದಲ್ಲ ಅವರ ಹೆಸರುಗಳು ಬಂದ ಬಗ್ಗೆಯು ಸಹ ನಾನು ಪ್ರಶ್ನಿಸಿಲ್ಲಾ. ನಮ್ಮ ಮತ್ತು ದಾವಾ ಜಮೀನುಗಳಲ್ಲಿ ಮನೆ ಕಟ್ಟಿದವರ ಮಧ್ಯೆ ಯಾವುದೇ ವ್ಯಾಜ್ಯ ಇರುವುದಿಲ್ಲ. ಅವರು ಕಾನೂನಾನುಸಾರ ಮನೆ ಕಟ್ಟಿದ್ದರಿಂದ ನಮ್ಮ ತಕರಾರು ಇರುವುದಿಲ್ಲ. 7 ರಿಂದ 26 ನೇ ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಎಷ್ಟು ಜಾಗ ಹೊಂದಿದ್ದಾರೆ ಎಂದು ಹೇಳಲು ಆಗುವುದಿಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯೆ ವ್ಯಾಜ್ಯ ಇರುತ್ತದೆ. ನನಗೂ ಮತ್ತು ಬೇರೆಯವರಿಗೂ ಯಾವುದೇ ತಂಟೆ ತಕರಾರು ಇಲ್ಲ. 7 ರಿಂದ 26 ನೇ ಪ್ರತಿವಾದಿಯರನ್ನು ದಾವಾ ಆಸ್ತಿಯಿಂದ ಬಿಟ್ಟು ಹೋಗಿ ಎಂದು ಹೇಳಿರುವುದಿಲ್ಲ.

<u>ಪಾಟೀ ಸವಾಲುಃ ಶ್ರೀ. ಎಸ್. ಆರ್. ಎಚ್. 1 ನೇ ಪ್ರತಿವಾದಿ ಪರ ವಕೀಲರಿಂದ.</u>

ವಕೀಲರು ನ್ಯಾಯಾಲಯದಲ್ಲಿ ಹಾಜರು ಇರದೇ ಇದ್ದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ಮತ್ತು ಜೆ. ಎಂ. ಎಫ್. ಸಿ., ಬೆಳಗಾವಿ.

**OS No. 1141/2015**
**PW-1**